# ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಯಲಬುರ್ಗಾ

## ಸಿ.ಸಿ. 584/2023

| | | | |
|---|---|---|---|
| ಸಾಕ್ಷಿಯ ಹೆಸರು | ಃ ಇಮಾಮ್ ಸಾಬ | ಪ್ರಾ ಸಾ : | 01 |
| ತಂದೆ/ಗಂಡನ ಹೆಸರು | : ಮರ್ದಾನ್ ಸಾಬ | ಚಾ ಸಾ : | 03 |
| ವಯಸ್ಸು | : 68 ವರ್ಷ | | |
| ವೃತ್ತಿ | ಃ ವ್ಯವಸಾಯ | | |
| ವಾಸಸ್ಥಳ | ಃ ಮಾಳೆಕೊಪ್ಪ | | |

ಸಾಕ್ಷಿಗೆ ದಿನಾಂಕಃ **28-02-2024** ರಂದು ಪ್ರಮಾಣ ವಚನ ನೀಡಲಾಯಿತು

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ

ಮೃತ ತೋಟಪ್ಪ ತಂದೆ ಶರಣಬಸಪ್ಪ ರವರ ಪರಿಚಯ ಇದೆ. ಮೃತ ಚಾಸಾ-೧ ರವರು ಗೊತ್ತು. ಚಾಸಾ 2 ನನ್ನ ಹೆಂಡತಿ. ಚಾಸಾ 4 ರವರ ಪರಿಚಯ ಇದೆ. 4 ವರ್ಷಗಳ ಹಿಂದೆ ತೋಟಪ್ಪ ಬಿದ್ದು ಮೃತ ಪಟ್ಟಿರುತ್ತಾರೆ. ಕುಕನೂರಿನಿಂದ ಮಾಳೆಕೊಪ್ಪ ಗ್ರಾಮಕ್ಕೆ ಗೂಡ್ಸ ವಾಹನ ಹೋಗುತ್ತಿತ್ತು. ಮಾನ್ನಪುರ ದಾಟಿದ ನಂತರ ಗೂಡ್ಸ ವಾಹನ ಪಲ್ಟಿಯಾಗಿರುತ್ತದೆ. ಗೂಡ್ಸ ವಾಹನದಲ್ಲಿ ಚಾಸಾ-1, 2, 4 ನಾನು ಹಾಗೂ ಮೃತ ತೋಟಪ್ಪ ಹೊರಟಿದ್ದೆವು. ಗೂಡ್ಸ ವಾಹನ ಚಾಲಕ ವಾಹನವನ್ನು ನಿಧಾನವಾಗಿ ಚಲಾಯಿಸುತ್ತಿದ್ದರು. ಅಪಘಾತದಲ್ಲಿ 4-5 ಜನರಿಗೆ ಪೆಟ್ಟಾಗಿರುತ್ತದೆ. ತೊಟಪ್ಪ ಸ್ಥಳದಲ್ಲಿಯೇ ಮೃತ ಪಟ್ಟಿರುತ್ತಾರೆ. ಅಪಘಾತದಲ್ಲಿ ಗುರುಬಸವ್ವ ಹಡಪದ ರವರು ಸ್ಥಳದಲ್ಲಿಯೇ ಮೃತ ಪಟ್ಟಿರುತ್ತಾರೆ. ಅಪಘಾತದಲ್ಲಿ ನನಗೆ ತಲೆಗೆ ಮೈ ಕೈಗಳಿಗೂ ಹಣೆಗು ಪೆಟ್ಟಾಗಿರುತ್ತದೆ. ಅಪಘಾತದ ನಂತರ ಆ್ಯಂಬುಲೇನ್ಸ್ ನಲ್ಲಿ ಕೊಪ್ಪಳದ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇವೆ. ಅಪಘಾತ ಯಾರ ತಪ್ಪಿನಿಂದ

ಆಗಿರುತ್ತದೆ ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ ನಾನು ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆತನ ಹೆಸರು ಖಾಜಾಸಾಬ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದರು , ನೀಡಲಾಯಿತು)

<u>ಪಾಟೀಸವಾಲುಃ ಸ.ಸ.ಅ ರವರಿಂದ</u>

ದಿನಾಂಕ 05-11-2018 ರಂದು ಬೆಳಿಗ್ಗೆ ನಾನು ಸಂತೆ ಮಾಡಲು ಕುಕನೂರಿಗೆ ಬಸ್ ನಲ್ಲಿ ಬಂದಿದ್ದೇನು. ನಂತರ 1 ನೇ ಆರೋಪಿ ರಾಜೇಸಾಬರವರ ಗೂಡ್ಸ ಆಟೋದಲ್ಲಿ ಊರಿಗೆ ಹೋಗುತ್ತಿದ್ದೇನು ಎಂದರೆ ಸರಿ. ಮನ್ನಾಪುರ ದಾಟಿದ ನಂತರ 1 ನೇ ಆರೋಪಿ ತನ್ನ ವಾಹನವನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಕತ್ತಲೆಯಾಗಿದ್ದರಿಂದ ಬೇಗ ಊರು ಸೇರಬೇಕು ಎಂದು ವೇಗವಾಗಿ ಹೋಗುತ್ತಿದ್ದರು ಎಂದರೆ ಸರಿ. ಅಪಘಾತದ ನಂತರ ನಾನು ಆ್ಯಂಬುಲೇನ್ಸ ನಲ್ಲಿ ಕೂಕನೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ಹೆಚ್ಚಿನ ಚಿಕಿತ್ಸೆಗಾಗಿ ಕೊಪ್ಪಳದ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇನೆ ಎಂದರೆ ಸರಿ. ಅಪಘಾತದ ನಂತರ ಚಾಸಾ-1 ರವರು ದೂರು ನೀಡಿರುತ್ತಾರೆ ಎಂದರೆ ಸರಿ. ಸದರಿ ವಾಹನಕ್ಕೆ ನೊಂದಾಣಿ ಸಂಖ್ಯೆ ಇರಲಿಲ್ಲ ಚೆಸ್ಸಿ ನಂಃ ಎಮ್ ಡಿ 2 ಎ 98 ಎ-ವಾಯ್ 4 ಜೆ ಡಬ್ಲ್ಯೂ ಸಿ-39639 ಆಗಿತ್ತು ಎಂದರೆ ಸರಿ. 1 ನೇ ಆರೋಪಿ ತನ್ನ ವಾಹನವನ್ನು ಅತಿವೇಗವಾಗಿ

ಚಲಾಯಿಸಿದ್ದರಿಂದ ವಾಹನ ಪಲ್ಟಿಯಾಗಿ ತೋಟಪ್ಪ ಹಾಗೂ ಗುರುಬಸವ್ವ ಮೃತ ಪಟ್ಟಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದ .

ಅಪಘಾತದ ವಿಚಾರವಾಗಿ ನಾನು ಕೊಪ್ಪಳದ ಆಸ್ಪತ್ರೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಹೇಳಿಕೆ ನೀಡಿದ ದಿನಾಂಕ ತಿಂಗಳು ನನಗೆ ಗೊತ್ತಿಲ್ಲ. ಗೂಡ್ಸ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ಗೂಡ್ಸ ವಾಹನವನ್ನು ೧ನೇ ಆರೋಪಿ ಚಲಾಯಿಸುತ್ತಿದ್ದರು ಅವರ ಹೆಸರು ನನಗೆ ನೆನಪಿಲ್ಲ. ನಾನು ಸದರಿ ಗೂಡ್ಸ ವಾಹನದ ಹಿಂಭಾಗದಲ್ಲಿ ಕುಳಿತ್ತಿದ್ದೇನು. ೧ನೇ ಆರೋಪಿ ವಾಹನನ್ನು ಹೇಗೆ ಚಲಾಯಿಸುತ್ತಿದ್ದರು ನನಗೆ ಗೊತ್ತಿಲ್ಲ. ನಾನು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಪೊಲೀಸರಿಗೆ ನೀಡಿಲ್ಲ. ೧ನೇ ಆರೋಪಿ ವಾಹನವನ್ನು ನಿಧಾನವಾಗಿ ಚಲಾಯಿಸುತ್ತಿದರು ಎಂದರೆ ಸಾಕ್ಷಿಯೂ ವೇಗವಾಗಿ ಚಲಾಯಿಸುತ್ತಿರಲಿಲ್ಲ ಒಂದು ಲೆಕ್ಕಕ್ಕೆ ಚಲಾಯಿಸುತ್ತಿದ್ದರು ಎಂದು ನುಡಿದರು. ಸದರಿ ದಿನ ನಾನು ಗೂಡ್ಸ ವಾಹನದಲ್ಲಿ ಪ್ರಯಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ೧ ನೇ ಅರೋಪಿಯ ತಪ್ಪಿಂದ ಅಪಘಾತವಾಗಿಲ್ಲ ನಾನು ಪೊಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ. ಓ. ಹೇ. ಸ. ಒ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಇಟರ್ನಿಟಿ ಕುಕನೂರು.